ತರೀಕೆರೆಯ ಕೃಷಿ ಮಾರುಕಟ್ಟೆಯಿಂದ ಬಂದ ಆದಾಯ

430 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000 ಹಾಗೂ 2000-2001ರಲ್ಲಿ ಇಲ್ಲಿಯವರೆಗೆ ತರೀಕೆರೆ ಕೃಷಿ ಮಾರುಕಟ್ಟೆಯಿಂದ ಬಂದ ಆದಾಯವೆಷ್ಟು?

ಆ) 1999-2000 ಹಾಗೂ 2000-2001ದಲ್ಲಿ ಇಲ್ಲಿಯವರೆಗೆ ಕೃಷಿ ಮಾರುಕಟ್ಟೆಯಿಂದ ಯಾವ ಅಭಿವೃದ್ಧಿ ಕೆಲಸ ಮಾಡಲಾಗಿದೆ? ಇವುಗಳಲ್ಲಿ ಯಾವುವು ಪ್ರಗತಿಯಲ್ಲಿದ್ದು, ಯಾವ ಹಂತದಲ್ಲಿವೆ?

ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) 1999-2000ನೇ ಸಾಲಿನಲ್ಲಿ ರೂ. 44,60,857-00 ಮತ್ತು
2000-2001ನೇ ಸಾಲಿನಲ್ಲಿ
ಸೆಪ್ಟೆಂಬರ್ ಅಂತ್ಯದವರೆಗೆ ರೂ. 22,19,221-00
ಒಟ್ಟು ಆದಾಯ ಬಂದಿದೆ. ರೂ 60,80,078-00

ಆ) 1999-2000ನೇ ಸಾಲಿನಲ್ಲಿ (8) ಅಭಿವೃದ್ಧಿ ಕಾಮಗಾರಿಗಳನ್ನು ಮತ್ತು 2000-2001ನೇ ಸಾಲಿನಲ್ಲಿ (9) ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅವುಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ ಹಾಗೂ ಕೆಲಸದ ಹಂತವನ್ನು ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಲಾಗಿದೆ.

ಅನುಬಂಧ - 1

ಕ್ರ. ಸಂ.	ಕಾಮಗಾರಿಯ ಹೆಸರು	ಹಂತ ಭೌತಿಕ ಪ್ರಗತಿ	ಆರ್ಥಿಕ ಪ್ರಗತಿ ರೂ.ಗಳಲ್ಲಿ
1999-2000ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳು			
1.	ಶಿವನಿ ರೈಲು ನಿಲ್ದಾಣದ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಆಡಳಿತ ಕಛೇರಿ-ವ-ಗೋದಾಮು ನಿರ್ಮಾಣ	ಕೆಲಸ ಪೂರ್ಣಗೊಂಡಿದೆ	2,57,509-00
2.	ಲಕ್ಕವಳ್ಳಿ ಗ್ರಾಮೀಣ ಸಂತೆಯಲ್ಲಿ ಪ್ಲಾಟ್‌ಫಾರಂ ಮತ್ತು ರಸ್ತೆ ನಿರ್ಮಾಣ ಕಾಮಗಾರಿ	-"-	1,49,662-00

ಕ್ರ. ಸಂ.	ಕಾಮಗಾರಿಯ ಹೆಸರು	ಹಂತ ಭೌತಿಕ ಪ್ರಗತಿ	ಆರ್ಥಿಕ ಪ್ರಗತಿ ರೂ.ಗಳಲ್ಲಿ
3.	ಮುಖ್ಯ ಮಾರುಕಟ್ಟೆಯಲ್ಲಿ 4 ಬ್ಲಾಕ್ ಅಂಗಡಿ ಮಳಿಗೆಗಳ ಮುಂಭಾಗದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ.	ಡಾಂಬರೀಕರಣ ಬಾಕಿ ಇದೆ	61,864-00
4.	ಹುಣಸಘಟ್ಟ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಗ್ರಾಮೀಣ ಸಂತೆ ಅಭಿವೃದ್ಧಿಪಡಿಸುವ ಕಾಮಗಾರಿ	ಕೆಲಸ ಪೂರ್ಣಗೊಂಡಿದೆ ಅಂತಿಮ ಬಿಲ್ಲು ಪಾವತಿಸಬೇಕಿದೆ	2,24,404-00
5.	ಅಜ್ಜಂಪುರ ಉಪ ಮರುಕಟ್ಟೆ ಪ್ರಾಂಗಣದಲ್ಲಿ ರಸ್ತೆಗಳ ನಿರ್ಮಾಣ ಕಾಮಗಾರಿ	ಕೆಲಸ ಪೂರ್ಣಗೊಂಡಿದೆ	2,62,819-00
6.	ಎಂ.ಸಿ.ಹಳ್ಳಿ ಗ್ರಾಮದಲ್ಲಿ ರೈತರು ಉಪಯೋಗಕ್ಕಾಗಿ ಸಾಮೂಹಿಕ ಕಣ ನಿರ್ಮಿಸುವ ಕಾಮಗಾರಿ	-"-	2,14,858-00
7.	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಬ್ಲಾಕ್ 3ರ ಸಣ್ಣಮಳಿಗೆಗಳ ದುರಸ್ತಿ	-"-	86,217-00
8.	ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಉಪಹಾರ ಗೃಹಕ್ಕೆ ವಿಶೇಷ ದುರಸ್ಥಿ ಮೊತ್ತ	-"-	33,111-00
			12,90,444-00

2000-2001ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳು

1.	ಮುದುಗೋಡು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ರೈತರ ಉಪಯೋಗಕ್ಕಾಗಿ ಸಂತೆ ಅಭಿವೃದ್ಧಿ ಕಾಮಗಾರಿ	ಬಹುತೇಕ ಕೆಲಸಗಳು ಪೂರ್ಣಗೊಂಡಿವೆ ಡಾಂಬರೀಕರಣ ಬಾಕಿ ಇದೆ.	2,07,960-00
2.	ಅಜ್ಜಂಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 1 ಕೊಳವೆ ಬಾವಿ ನಿರ್ಮಿಸುವುದು	ಕೆಲಸ ಪೂರ್ಣಗೊಂಡಿದೆ	21,639-00
3.	ಶಿವನಿ ಆರ್.ಎಸ್.ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ಕಛೇರಿ ಕಂ ಗೋದಾಮಿಗೆ ವಿದ್ಯುದ್ದೀಕರಣ	ಕೆಲಸ ಪೂರ್ಣಗೊಂಡಿದೆ ಅಂತಿಮ ಬಿಲ್ಲು ಪಾವತಿಸಬೇಕಾಗಿದೆ.	31,460-00

ಕ್ರ. ಸಂ.	ಕಾಮಗಾರಿಯ ಹೆಸರು	ಹಂತ ಭೌತಿಕ ಪ್ರಗತಿ	ಆರ್ಥಿಕ ಪ್ರಗತಿ ರೂ.ಗಳಲ್ಲಿ
4.	ತರೀಕೆರೆ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಉಪಹಾರ ಗೃಹಕ್ಕೆ ವಿದ್ಯುದ್ದೀಕರಣ	ಕೆಲಸ ಪೂರ್ಣ-ಗೊಂಡಿದೆ	11,219-00
5.	ಶಿವನಿ ಆರ್.ಎಸ್.ಉಪ ಮಾರುಕಟ್ಟೆ ಪ್ರಾಂಗಣ ದಲ್ಲಿ ಕಛೇರಿ-ಕಂ- ಗೋದಾಮು ಪಕ್ಕದಲ್ಲಿ ಗುಂಡಿ ಮುಚ್ಚುವ ಕಾಮಗಾರಿ	-"-	24,724-00
6.	ಅಜ್ಜಂಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಮುಚ್ಚಿದ ಹರಾಜುಕಟ್ಟೆ ನಿರ್ಮಾಣ ಸಂಖ್ಯೆ 1	ಕೆಲಸ ಪ್ರಗತಿಯಲ್ಲಿದೆ ಅಡಿಪಾಯ ಮತ್ತು ಕಂಬಗಳ ಕೆಲಸ ಮುಗಿದಿದೆ.	1,66,446-00
7.	ಅಜ್ಜಂಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಮುಚ್ಚಿದ ಹರಾಜುಕಟ್ಟೆ ನಿರ್ಮಾಣ ಸಂಖ್ಯೆ 2	ಕೆಲಸ ಪ್ರಗತಿಯಲ್ಲಿದೆ ಅಡಿಪಾಯ ಮತ್ತು ಕಂಬಗಳ ಕೆಲಸ ಪ್ರಗತಿಯಲ್ಲಿದೆ.	1,66,446-00
8.	ಅಜ್ಜಂಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಮುಚ್ಚಿದ ಹರಾಜುಕಟ್ಟೆ ನಿರ್ಮಾಣಸಂಖ್ಯೆ .3	ಕೆಲಸ ಪ್ರಗತಿಯಲ್ಲಿದೆ. ಅಡಿಪಾಯ ಮತ್ತು ಕಂಬಗಳ ಕೆಲಸ ಪ್ರಗತಿಯಲ್ಲಿದೆ	1,66,446-00
9.	ಅಜ್ಜಂಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಆಡಳಿತ ಕಛೇರಿ ಕಟ್ಟಡ ನಿರ್ಮಾಣ	ಅಡಿಪಾಯ ಮತ್ತು ಇಟ್ಟಿಗೆ ಕೆಲಸ ಪೂರ್ಣ ಗೊಂಡಿದೆ ಛಾವಣಿ ಕೆಲಸ ಪ್ರಗತಿಯಲ್ಲಿದೆ.	1,53,596-00
		ಮೊತ್ತ: ರೂ	**9,49,945-00**

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬಹಳ ವಿಸ್ತಾರವಾಗಿ ಉತ್ತರವನ್ನು ಒದಗಿಸಿದ್ದಾರೆ. 2000-2001ನೇ ಸಾಲಿನಲ್ಲಿ 9 ಲಕ್ಷಕ್ಕೂ ಹೆಚ್ಚು ಹಣ ಖರ್ಚಾಗಿದೆ ಎಂದು ಅವರು ಹೇಳಿದ್ದಾರೆ. ಅಲ್ಲಿನ ಕಾಮಗಾರಿಗಳು ಉತ್ತಮ ರೀತಿಯಲ್ಲಿ ಆಗಿಲ್ಲ ಎಂದು ನಾನು ಮಾನ್ಯ ಸಚಿವರಿಗೆ ಒಂದು ತಿಂಗಳ ಹಿಂದೆ ಒಂದು ಪತ್ರ ಬರೆದಿದ್ದೆ. ಅದನ್ನು ಅವರೂ ಸಹ ಮನಗಂಡಿದ್ದಾರೆ. ಕೆಲಸ ಪೂರ್ಣಗೊಂಡಿದೆ ಎಂದು ಹೇಳುತ್ತಾರೆ, ಆದರೆ ಇನ್ನೂ ಪೂರ್ಣಗೊಂಡಿಲ್ಲ. ಕೆಲಸಗಳು ಪೂರ್ಣಗೊಳ್ಳದೇ ಇರುವುದರಿಂದ ಮತ್ತು ಕಳಪೆ ಕಾಮಗಾರಿಗಳಾಗಿರುವುದರಿಂದ, ಈ ಕಾಮಗಾರಿಗಳನ್ನು

ಸೂಕ್ತ ರೀತಿಯಲ್ಲಿ ಪೂರ್ಣಗೊಳಿಸಲು ಮತ್ತು ಗುಣಮಟ್ಟವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ದಯಮಾಡಿ ಇದನ್ನು ಲೋಕೋಪಯೋಗಿ ಇಲಾಖೆಯ ಇಂಜಿನಿಯರಿಂಗ್ ವಿಭಾಗದಿಂದ ತನಿಖೆ ಮಡಿಸಬೇಕು ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಬಿ. ತಿಮ್ಮಾಪೂರ್ : ಮಾನ್ಯ ಅಧ್ಯಕ್ಷರೇ, ಅಲ್ಲಿ ಚುನಾಯಿತ ಪ್ರತಿನಿಧಿಗಳ ಸಮಿತಿ ಇದೆ. ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಮತ್ತು ಆ ಸಮಿತಿ ಒಟ್ಟುಗೂಡಿ ಕೆಲಸ ಮಾಡತಕ್ಕಂಥ ಕಾರ್ಯವೈಖರಿಯಿದೆ. ಅಲ್ಲಿ ಹಲವಾರು ಕೆಲಸಗಳಿಗೆ ಮಂಜೂರಾತಿ ಕೊಡಲಾಗಿದೆ. ಅದರಲ್ಲೇನಾದರೂ ಅವ್ಯವಹಾರವಾಗಿದೆ ಅಥವಾ ಸರಿಯಾದ ಕಟ್ಟಡ ಆಗಿಲ್ಲ ಎನ್ನುವ ಭಾವನೆ ಬಂದರೆ, ಯಾವ ಯಾವ ಕಟ್ಟಡ ಹಾಗೆ ಆಗಿದೆ ಎನ್ನುವ ಬಗ್ಗೆ ಒಂದು ವರದಿ ಕೊಟ್ಟರೆ ಅದರ ಬಗ್ಗೆ ನಾವು ತನಿಖೆ ಮಾಡಿಸುತ್ತೇವೆ ಅಥವಾ ಒಂದು ಸಮಿತಿ ನೇಮಕ ಮಾಡಿ ಅದರ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಈಗ ಆಗಿರುವ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಬೇಕು.

ಶ್ರೀ ಆರ್.ಬಿ. ತಿಮ್ಮಾಪುರ್ : ಹಾಗೇನಾದರೂ ಇದ್ದರೆ ತನಿಖೆ ನಡೆಸುತ್ತೇವೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹೊಸದಾಗಿ ಆಚರಣೆಗೊಳಿಸಲಾದ ಬಸ್ ಮಾರ್ಗಗಳು

431 - ಶ್ರೀ ಲಿಂಗಪ್ಪ ಸಿ.ಎಂ. (ರಾಮನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1999ರ ಅಕ್ಟೋಬರ್ ತಿಂಗಳಿನಿಂದ ಈ ವರೆವಿಗೆ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಹೊಸದಾಗಿ ಆಚರಣೆಗೊಳಿಸಲಾದ ಬಸ್ ಮಾರ್ಗಗಳು ಯಾವುವು? (ತಾಲ್ಲೂಕುವಾರು ಪಟ್ಟಿಯನ್ನು ನೀಡುವುದು).*

ಆ) *ಹೊಸದಾಗಿ ಬಸ್ ಮಾರ್ಗಗಳ ಆಚರಣೆ ಕಡಿಮೆಯಾಗಲು ಕಾರಣಗಳೇನು?*

ಇ) *ರಾಜ್ಯದ ಗ್ರಾಮಾಂತರ ಪ್ರದೇಶದ ಬಹಳಷ್ಟು ಮಾರ್ಗಗಳಲ್ಲಿ ಹೊಸ ಬಸ್ಸುಗಳನ್ನು ಆಚರಣೆಗೊಳಿಸಬೇಕೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ, ಉಳಿದಿರುವ ಮಾರ್ಗಗಳಲ್ಲಿ ಬಸ್ಸುಗಳನ್ನು ಆಚರಿಸಲು ಎಷ್ಟು ಕಾಲಾವಕಾಶಗಳು ಬೇಕಾಗುವುದು?*

ಶ್ರೀ ಸಿ.ಆರ್. ಸಗೀರ್ ಆಹ್ಮದ್ (ಸಾರಿಗೆ ಸಚಿವರು) :

ಅ) ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಅಕ್ಟೋಬರ್ 1999 ರಿಂದ ಇಲ್ಲಿಯವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು652 ಹೊಸ ಮಾರ್ಗಗಳನ್ನು ಪ್ರಾರಂಭಿಸಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ - 1ರಲ್ಲಿ ನೀಡಲಾಗಿದೆ.

ಆ) ಕಡಿಮೆಯಾಗಿಲ್ಲ.